ಪ್ರತಿಬಿಂಬ

**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-2 Issue 3, Nov-Dec 2020, 66-72**
**©*IIMRD*, Mysuru**
IIMRD JOURNALS

**www.iimrd.com**

# ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಅಮಾನಿಕೆರೆ

**ಅನಿತ ಟಿ[*] ಮತ್ತು ಡಾ. ನಾಗರತ್ನಮ್ಮ ಎಸ್[**]**

**ಪೀಠಿಕೆ**

ಜಾಗತಿಕ ಮಟ್ಟದಲ್ಲಿ ಭಾರತ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಇದು ಸಾಧ್ಯವಾಗಿರುವುದು ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕವಾಗಿ ಎಂದರೆ ಅತಿಶಯೋಕ್ತಿಯಲ್ಲ. ಭಾರತದ ಈ ಸಾಧನೆಗೆ ನಮ್ಮ ರಾಜ್ಯವೂ ವಿಶಿಷ್ಟವಾದ ಕೊಡುಗೆಯನ್ನು ನೀಡಿದೆ. ಪ್ರತಿಯೊಂದು ಜಿಲ್ಲೆಯೂ ತನ್ನದೆ ಆದ ಪರಂಪರೆಯನ್ನು ಹೊಂದಿದ್ದು ಪ್ರತಿ ನಿತ್ಯ ಸಾವಿರಾರು ಪ್ರವಾಸಿಗರನ್ನು ತನ್ನತ್ತಾ ಸೆಳೆಯುತ್ತಿದೆ ಆದ್ದರಿಂದಲೇ ನಮ್ಮ ನಾಡನ್ನು *ಪ್ರವಾಸಿಗರ ಸ್ವರ್ಗ* ಎಂದು ಕರೆದಿದ್ದಾರೆ. ಪ್ರತಿ ಜಿಲ್ಲೆಯೂ ಒಂದೊಂದು ರೀತಿಯ ಗುಣ ವಿಶೇಷತೆಗಳನ್ನು ಹೊಂದಿದೆ. ನಮ್ಮ ನಾಡಿನಲ್ಲಿನ ಪ್ರಕೃತಿ ಸೌಂದರ್ಯ ಮತ್ತು ಮಾನವನ ಅಭಿವೃದ್ಧಿಯ ಪ್ರಯತ್ನಗಳೆರಡರ ಪ್ರತಿಫಲವಾಗಿ ಇದು ಸಾಧ್ಯವಾಗಿಸಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಸಮತಟ್ಟಾದ ಪ್ರದೇಶ ಮತ್ತು ಬೆಟ್ಟಗುಡ್ಡಗಳಿಂದ ಆವೃತ್ತವಾಗಿರುವ ನಮ್ಮ ನಾಡು ಎತ್ತರವಾದ ಪಶ್ಚಿಮ ಘಟ್ಟಗಳು, ನಿತ್ಯಹರಿದ್ವರ್ಣದ ಕಾಡುಗಳು, ಸಸ್ಯ ಮತ್ತು ಪ್ರಾಣಿ ಸಂಪತ್ತನ್ನು ಹೇರಳವಾಗಿ ಒಳಗೊಂಡಿದೆ. ಅಲ್ಲದೆ ಅನೇಕ ನದಿಗಳು ಇಲ್ಲಿಯೇ ಹುಟ್ಟಿ ಪೂರ್ವ ಮತ್ತು ಪಶ್ಚಿಮದ ಕಡೆಗೆ ಹರಿದು ಫಲವತ್ತಾದ ಮೆಕ್ಕಲು ಮಣ್ಣನ್ನು ಹೊತ್ತು ತಂದು ಭೂಮಿಯನ್ನು ಕೃಷಿ ಮತ್ತು ವ್ಯವಸಾಯದಲ್ಲೆ ಯೋಗ್ಯವಾದ ರೀತಿಯಲ್ಲಿ ಹದಗೊಳಿಸಿದೆ. ಹೀಗೆ ವೈವಿಧ್ಯಮಯವಾಗಿರುವ ನಮ್ಮ ನಾಡಿನ ಪ್ರವಾಸೋದ್ಯಮಕ್ಕೆ ತುಮಕೂರು ಜಿಲ್ಲೆಯೂ ಸಹ ಕೈಜೋಡಿಸಿದೆ. ತುಮಕೂರು ಜಿಲ್ಲೆ ಕೇವಲ ರಾಷ್ಟ್ರೀಯ ಮಟ್ಟದಲ್ಲಿ ಅಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಹೆಸರು ಮಾಡಿದೆ. ಶೈಕ್ಷಣಿಕ ಕೇಂದ್ರ ಹಾಗೂ ಕಲ್ಪತರು ನಾಡು ಎಂದೇ ಗುರುತಿಸಿಕೊಂಡಿರುವ ತುಮಕೂರು ಅನೇಕ ಐತಿಹಾಸಿಕ ತಾಣಗಳನ್ನು, ದೇವಾಲಯಗಳ್ನು, ಶಿಕ್ಷಣ ಸಂಸ್ಥೆಗಳನ್ನು ಒಳಗೊಂಡಿದೆ. ಸುತ್ತಲೂ ಬೆಟ್ಟಗಳಿಂದ ಆವೃತ್ತವಾಗಿರುವ ತುಮಕೂರು ಇದು ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಬೆಂಗಳೂರಿನಿಂದ ಉತ್ತರಕ್ಕೆ ಸುಮಾರು 70 ಕಿ.ಮೀ ದೂರದಲ್ಲಿದೆ. ಈ ನಗರ ಸುಮಾರು 10ನೇ ಶತಮಾನದ ಶಾಸನವೊಂದರಲ್ಲಿ ತುಮಕೂರನ್ನು 'ತುಂಬೆ ಊರು' ಅಥವಾ 'ತುಮ್ಮುಗೆರೆ' ಎಂಬುದಾಗಿ ದಾಖಲಿಸಲಾಗಿದೆ.[1] ಬಹುಶಃ ಈ ಪರಿಸರದಲ್ಲಿ ಹೇರಳವಾಗಿ ತುಂಬೆ ಹೂವಿನ ಗಿಡಗಳು ಬೆಳೆದಿದ್ದರಿಂದ ತುಂಬೆಕೂರು ಎಂಬ ಹೆಸರು ರೂಢಿಗೆ ಬಂದಿದೆ ಎಂಬ ಐತಿಹ್ಯವಿದೆ. ಕಾಲಾನಂತರದಲ್ಲಿ ತುಂಬೆಕೂರು ಎಂಬುದು ತುಮಕೂರು ಆಗಿದೆ ಎಂಬುದು ಸ್ಥಳಿಯರ ಹೇಳಿಕೆಯಾಗಿದೆ.[2] ತುಮಕೂರು ಮೊದಲು ಹಳೆಯ ಮೈಸೂರು ರಾಜ್ಯದ ಒಂದು ಭಾಗವಾಗಿ ಮಹಾರಾಜರ ಅಧೀನದಲ್ಲಿತ್ತು. 1832ರಲ್ಲಿ

[*] *ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು.*

[**] *ಮುಖ್ಯಸ್ಥರು ಮತ್ತು ಮಾರ್ಗದರ್ಶಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು.*

ಮೈಸೂರಿನ ಬ್ರಿಟಿಷ್ ಕಮೀಷ್ನರ್ ಆಗಿದ್ದಂತ ಮಾರ್ಕ್ ಕಬ್ಬನ್ ರವರು ಅಂದು ಚಿತ್ರದುರ್ಗ ವಿಭಾಗಕ್ಕೆ ತುಮಕೂರನ್ನು ಸೇರಿಸಿದರು.

ನಂತರದಲ್ಲಿ ಕ್ರಿ.ಶ 1861–62ರ ಅವಧಿಯಲ್ಲಿ ಥಾಮಸ್ ಮನ್ರೋವಿನ ಸಿದ್ಧಾಂತವನ್ನು ಅಳವಡಿಸಿಕೊಂಡ ಮತ್ತೊಬ್ಬ ಹೆಸರಾಂತ ಬ್ರಿಟಿಷ್ ಅಧಿಕಾರಿ ಲೂಯಿ ಬೆಂಥಾಮ್ ಬೌರಿಂಗ್ ರವರು ತುಮಕೂರನ್ನು ಪ್ರತ್ಯೇಕವಾದ ವಿಭಾಗವಾಗಿ ವಿಂಗಡಿಸಿದರು. ಅಲ್ಲಿಂದ ಮುಂದೆ 1916 ರಲ್ಲಿ ವಿಭಾಗೀಯ ಮಟ್ಟದಿಂದ ತುಮಕೂರು ಜಿಲ್ಲೆಯಾಗಿ ಹೊರ ಹೊಮ್ಮಿತು. ಪ್ರಸ್ತುತ ತುಮಕೂರು, ಶಿರಾ, ಗುಬ್ಬಿ, ತಿಪಟೂರು, ತುರುವೆಕೆರೆ, ಕುಣಿಗಲ್, ಮಧುಗಿರಿ, ಪಾವಗಡ, ಕೊರಟಗೆರೆ, ಚಿಕ್ಕನಾಯಕನಹಳ್ಳಿ ಸೇರಿದಂತೆ ಒಟ್ಟು 10 ತಾಲೂಕುಗಳನ್ನು ಒಳಗೊಂಡಿದೆ. 28 ಆಗಸ್ಟ್ 2010 ರಿಂದ ಮಹಾನಗರ ಪಾಲಿಕೆ ಹಾಗೂ 02 ಜೂನ್ 2017 ರಿಂದ ಸ್ಮಾರ್ಟ್ ಸಿಟಿ ವ್ಯಾಪ್ತಿಗೆ ಬಂದಿದೆ. ಇದು ನಮ್ಮ ತುಮಕೂರಿನ ಬೆಳವಣಿಗೆಗೆ ಕಳಸಪ್ರಾಯವಾಗಿದೆ. ಜಿಲ್ಲೆಯಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿದ್ದು ಪ್ರತಿ ದಿನ ಹೊಸಬರ ಆಗಮನಕ್ಕೆ ಸ್ವಾಗತಿಸುತ್ತಿದೆ. ತುಮಕೂರು ಜಿಲ್ಲೆಯು ಅನೇಕ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರಗಳ ಹಿನ್ನಲೆಯ ವ್ಯಾಪ್ತಿಯಲ್ಲಿ ಗೊರವನಹಳ್ಳಿ, ಮಧುಗಿರಿಯ ಏಕಶಿಲಾ ಬೆಟ್ಟ, ಸಿದ್ಧಗಂಗೆ, ಶಿವಗಂಗೆ, ಯಡೆಯೂರು, ದೇವರಾಯನ ದುರ್ಗ, ಸಿದ್ಧರಬೆಟ್ಟ, ಗೂಳೂರು, ಮಾರ್ಕೋನಹಳ್ಳಿ ಜಲಾಶಯ, ಮಂದರಗಿರಿ ಜೈನ ದೇವಾಲಯ, ಪಾವಗಡ ಶನಿದೇವಾಲಯ ಮತ್ತು ಸೋಲಾರ್ ಪಾರ್ಕ್, ಗುಬ್ಬಿ ಚನ್ನಬಸವೇಶ್ವರ ದೇವಾಲಯ ಹೀಗೆ ಇನ್ನೂ ಅನೇಕ ಸ್ಥಳಗಳು ಪ್ರವಾಸಿ ಮತ್ತು ಧಾರ್ಮಿಕ ಕೇಂದ್ರವಾಗಿವೆ ಹಾಗೂ ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದಾಯವನ್ನು ತಂದುಕೊಡುವತ್ತಾ ಹೆಜ್ಜೆ ಹಾಕುತ್ತಿವೆ. ಇಷ್ಟೆಲ್ಲಾ ಬೆಳವಣಿಗೆಯನ್ನು ಹೊಂದಿರುವ ತುಮಕೂರು ಇತ್ತೀಚಿನ ದಿನಗಳಲ್ಲಿ ಜನರನ್ನು ಆಕರ್ಷಿಸುವ ಸಲುವಾಗಿ ಅಮಾನಿಕೆರೆಯೂ ಒಂದು ಸುಂದರ ಉದ್ಯಾನವನವಾಗಿ ಹಾಗೂ ಸಾಂಸ್ಕೃತಿಕ ಮತ್ತು ಪ್ರವಾಸಿ ಕೇಂದ್ರವಾಗಿ ಹೊರ ಹೊಮ್ಮಿದೆ.

**ಅಮಾನಿಕೆರೆಯ ಹಿನ್ನಲೆ ಮತ್ತು ಇತಿಹಾಸ**

ಕೆರೆ, ಕಾಲುವೆಗಳನ್ನು ನಿರ್ಮಿಸುವುದು, ಒಡ್ಡುಗಳನ್ನು ಹಾಕುವುದು, ಬಾವಿಗಳನ್ನು ತೋಡಿಸುವುದರಿಂದ ಪುಣ್ಯ ಲಭಿಸುತ್ತದೆ ಹಾಗೂ ಮೇಲಿನ ನಮ್ಮ ಹಿರಿಯರಿಗೆ ಸ್ವರ್ಗ ಪ್ರಾಪ್ತಿಯಾಗುತ್ತದೆ ಎಂಬ ಧಾರ್ಮಿಕ ಹಿನ್ನಲೆಯಲ್ಲಿ ಇಂತಹ ಲೋಕ ಕಲ್ಯಾಣ ಕಾರ್ಯಗಳಿಗೆ ಧಾರ್ಮಿಕ ಹಿನ್ನಲೆಯಲ್ಲಿ ಹೆಚ್ಚಿನ ಮಹತ್ವ ನೀಡಲಾಗುತ್ತಿತ್ತು. ಇಂತಹ ನಂಬಿಕೆಗಳಿಂದ ಮನುಷ್ಯ ಪ್ರಾಣಿ ಪಕ್ಷಿಗಳಿಗೆ ಹಾಗೂ ಜನರಿಗೆ ಕುಡಿಯಲು ಮತ್ತು ಗೃಹ ಬಳಕೆಗೆ ಉಪಯೋಗವಾಗಲೆಂದೇ ಇವುಗಳು ಆಧಾರ ಎನಿಸಿದ್ದವು. ಕಾಲ ಕ್ರಮೇಣ ಇಂತಹ ಮೂಲಗಳು ಅಳಿವಿನ ಅಂಚಿಗೆ ಸಾಗಿ ನೀರಿನ ಕೊರತೆಯುಂಟಾಗಿ ನೀರಾವರಿ ವ್ಯವಸ್ಥೆಯಂತೆ ಮಾರ್ಪಾಡಾಗಿರುವುದನ್ನು ಗಮನಿಸಬಹುದು. ತುಮಕೂರಿನ ಅಮಾನಿಕೆರೆ ತಲಕಾಡಿನಲ್ಲಿ ಆಳ್ವಿಕೆ ಮಾಡುತ್ತಿದ್ದ ಗಂಗ ಅರಸರ ಕಾಲದಲ್ಲಿ ಈ ಕೆರೆಯು ನಿರ್ಮಾಣವಾಗಿದೆ ಎಂಬುದಾಗಿ ಸೋಮೇಶ್ವರ ದೇವಾಲಯದ ಆವರಣದಲ್ಲಿ ಉಳಿದು ಬಂದಿರುವ ಕ್ರಿ.ಶ 950ರ ಕಾಲಕ್ಕೆ ಸೇರಿದ ಶಿಲಾಶಾಸನದಿಂದ ಸ್ಪಷ್ಟವಾಗುತ್ತದೆ. ಶಾಸನವು ಪ್ರಸ್ತುತ ಪಡಿಸುವಂತೆ ತುಮಕೂರು ಪ್ರದೇಶವು ಗಂಗರ ರಾಜ್ಯಕ್ಕೆ ಸೇರಿದ್ದು,

ಇಮ್ಮಡಿ ಭೂತುಗನು (ಕ್ರಿ.ಶ 925–990) ಆಳ್ವಿಕೆ ನಡೆಸಿದ ಬಗೆಗೆ ಉಲ್ಲೇಖವಿದೆ. ಈ ಹಿನ್ನಲೆಯಲ್ಲಿ ತುಮಕೂರು ಅಮಾನಿಕೆರೆಯನ್ನು ತಲಕಾಡಿನ ಗಂಗರು ಕ್ರಿ.ಶ 950 ಕ್ಕಿಂತ ಮೊದಲೇ ನಿರ್ಮಾಣ ಮಾಡುದ್ದರೆಂದು ತಿಳಿದುಬರುತ್ತದೆ.[3] ಈ ಕೆರೆಯ ಮೇಲ್ವಿಚಾರಣೆಗೆ ಎಂಟು ಜನ ಮುಖಂಡರನ್ನು ಗೊತ್ತು ಮಾಡಿ ಅವರ ಅಭಿಪ್ರಾಯದಂತೆ ಕೆರೆಯನ್ನು ನಿರ್ಮಿಸಲು ಮತ್ತು ಕೆರೆಯ ಉಸ್ತುವಾರಿ ನೋಡಿಕೊಳ್ಳಲು ಅತ್ತಿಯಣ್ಣ ಎಂಬುವವರನ್ನು ಅಧಿಕಾರಿಯನ್ನಾಗಿ ನೇಮಿಸಿ ಆತನಿಗೆ ಹನ್ನೆರಡು ಖಂಡುಗ ಬಿತ್ತುವಟ್ಟು ಭೂಮಿಯನ್ನು ನೀಡಿ ಬ್ರಹ್ಮಪುತ್ರ ಎಂಬ ಬಿರುದನ್ನು ಕಂದಮಯ್ಯನ ಮಗ ಅಜ್ಜಮಯ್ಯಕೊಟ್ಟನೆಂದು ಉಲ್ಲೇಖಿಸಿದೆ.[4]

ಈ ದಾಖಲೆಯಿಂದ ಕೆರೆಯ ನಿರ್ಮಾಣವು ಕ್ರಿ.ಶ 950ಕ್ಕಿಂತ ಮೊದಲೇ ನಿರ್ಮಾಣವಾಗಿರುವುದು ಖಚಿತವಾಗುತ್ತದೆ. ಆಗ ಗಂಗ ಅರಸರ ಆಳ್ವಿಕೆಗೆ ಒಳಪಟ್ಟ ಅವರ ರಾಜ್ಯದ ಉತ್ತರದ ಗಡಿಯಾಗಿತ್ತು. ಗಂಗ ಅರಸರಿಗೂ ರಾಷ್ಟ್ರಕೂಟರಿಗೂ ಎಂಟು ಮತ್ತು ಒಂಬತ್ತನೇ ಶತಮಾನದಲ್ಲಿ ಪದೇ ಪದೇ ಯುದ್ಧಗಳು ನಡೆದಿದ್ದವು ಎಂಬುದನ್ನು ಹಿರೇಗುಂಡುಗಲ್ಲಿನಲ್ಲಿರುವ ಹದಿನೆಂಟು ವೀರಗಲ್ಲು ಶಾಸನಗಳು ಸಾಕ್ಷಿಯಾಗಿವೆ.[5]

ರಾಷ್ಟ್ರಕೂಟರ ಅಮೋಘ ವರ್ಷ ನೃಪತುಂಗನು (ಕ್ರಿ.ಶ814–878) ರಾಜ್ಯವಾಳುತ್ತಿದ್ದಾಗ ಅವನ ಮಗ ಕೃಷ್ಣ ದಂಗೆ ಎದ್ದು ಕೈದಾಳದಲ್ಲಿ ಆಶ್ರಯ ಪಡೆದುಕೊಂಡಿದ್ದಾಗ ನೃಪತುಂಗನ ದಂಡನಾಯಕ ಬಂಕೇಶನು ಕೈದಾಳದ ಮೇಲೆ ಆಕ್ರಮಣ ಮಾಡಿದ ಸಂದರ್ಭದಲ್ಲಿ ತುಮಕೂರು ಪ್ರದೇಶವು ಅವನ ವಶವಾಯಿತೆಂದು ಹಾಗೂ ಇಂತಹ ಸನ್ನಿವೇಶದಲ್ಲಿ ತಮ್ಮ ರಾಜ್ಯದ ಗಡಿಗಳನ್ನು ಭದ್ರಪಡಿಸಿಕೊಳ್ಳಲು ಗಂಗ ಅರಸರು 'ತುಮ್ಮೆಗ' ಎಂಬುವವನನ್ನು ಈ ಪ್ರದೇಶಕ್ಕೆ ಅಧಿಕಾರಿಯಾಗಿ ನೇಮಿಸಿದ ನಂತರ ಆತ ಇಲ್ಲಿ ಕೆರೆ ಮತ್ತು ಊರನ್ನು ಸ್ಥಾಪಿಸಿದ್ದರಿಂದ ಊರಿಗೆ 'ತಮ್ಮೆಗೂರು'ಎಂದು, ಕೆರೆಗೆ 'ತಮ್ಮೆಗೂರು ಕೆರೆ' ಎಂದು ಹೆಸರಾಯಿತೆನ್ನಲಾಗಿದೆ.[6]

ಜನಪದ ಸಂಪ್ರದಾಯದಲ್ಲಿ ತುಮಕೂರು ಪ್ರದೇಶವನ್ನು 'ಟುಮಕಿ' ಬಾರಿಸುವವರು ಇಲ್ಲಿ ಹೆಚ್ಚಾಗಿ ನೆಲೆಸಿದ್ದರಿಂದ ಈ ಊರನ್ನು 'ಟುಮಕಿಯೂರು' ಎಂದು ಕರೆಯಲಾಯಿತು ಎನ್ನಲಾಗಿದೆ.[7] ಒಟ್ಟಾರೆ ಏನೇ ಇರಲಿ ಈ ಕೆರೆಯನ್ನು ಮೂಲತಃ ಕೃಷಿಕರಾಗಿದ್ದ ಗಂಗ ಅರಸರಿಂದ ಕ್ರಿ.ಶ 950ಕ್ಕೆ ಮೊದಲು ಅಂದರೆ ಸುಮಾರು ಕ್ರಿ.ಶ 900 ರಲ್ಲಿ ಕೃಷಿಗೆ ಮತ್ತು ಕುಡಿಯಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ನಿರ್ಮಿಸಲಾಗಿದೆ ಎಂಬುದನ್ನು ಸ್ಪಷ್ಟಪಡಿಸಬಹುದು ಮತ್ತು ತುಮ್ಮೆಗೂರು ಎಂಬ ಮೂಲ ಹೆಸರನ್ನು ಹೊತ್ತ ಇಂದಿನ ನಮ್ಮ ತುಮಕೂರಿಗೆ ಒಂದು ಸಾವಿರ ವರ್ಷಗಳ ಇತಿಹಾಸವಿದೆ.[8]

ಬ್ರಿಟಿಷ್ ಅಧಿಕಾರಿಯಾಗಿದ್ದ ಕರ್ನಲ್ ಮೆಕೆಂಜಿ ದಕ್ಷಿಣ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಕೆರೆ ಕಟ್ಟೆಗಳನ್ನು ಕ್ರಿ.ಶ 1800ರಲ್ಲಿ ಸರ್ವೆ ಮಾಡಿರುವುದಾಗಿ ತಿಳಿದುಬರುತ್ತದೆ. ಅದರ ಆಧಾರದ ಮೇಲೆ ಮೈಸೂರಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ಕಮೀಷ್‌ನರ್ ಸರ್ಕಾರವು ಕ್ರಿಶ 1871ರಲ್ಲಿ ಮೊದಲ ಬಾರಿಗೆ ವಿಸ್ತೃತ ಸಮೀಕ್ಷೆ ಕೈಗೊಂಡು ಕೆರೆಗಳ ನೊಂದಾಣಿಯನ್ನು ಸಿದ್ಧಪಡಿಸಿತು. ಆ ಸಂದರ್ಭದಲ್ಲಿ ಅಮಾನಿಕೆರೆ ತುಮಕೂರು ಗ್ರಾಮಠಾಣಕ್ಕೆ ಸೇರದೆ ಇದ್ದುದ್ದರಿಂದ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು 'ಅಮಾನಿಕೆರೆ'

ಎಂದು ದಾಖಲಿಸಿತು. ಅದೇ ಹೆಸರೂ ಇಂದಿಗೂ ದಾಖಲೆಗಳಲ್ಲಿ ಮುಂದುವರಿದಿರುವುದನ್ನು ಗಮನಿಸಬಹುದು.[9]

ಗಂಗರ ಕಾಲಕ್ಕೆ ಸೇರಿದ ಈ ಕೆರೆಯು ಪ್ರಾಚೀನ ಇತಿಹಾಸವನ್ನು ಹೊಂದಿದ್ದು, ಪ್ರಸ್ತುತ 512 ಎಕರೆ ವಿಸ್ತೀರ್ಣವಿದೆ.[10] ಈ ಕೆರೆಯನ್ನು ರಾಷ್ಟ್ರೀಯ ಕೆರೆ ಸಂರಕ್ಷಣಾ ಯೋಜನೆಯ ಅಡಿಯಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಅಭಿವೃದ್ಧಿ ಪಡಿಸಲಾಗಿದೆ. ಹಾಗೂ ಇತ್ತೀಚ್ಚಿನ ದಿನಗಳಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಿಂದ ಮತ್ತಷ್ಟು ಅಭಿವೃದ್ಧಿಯನ್ನು ಕಾಣುತ್ತಿದೆ.

ಅಮಾನಿಕೆರೆಯು ತುಮಕೂರಿನಲ್ಲಿರುವ ದೊಡ್ಡ ಕೆರೆಯಲ್ಲಿ ಪ್ರಮುಖವಾದುದು. ಈ ಕೆರೆಯು ಒಂದು ಉದ್ಯಾನವಾಗಿರುವುದು ಇಲ್ಲಿನ ಜನತೆಗೆ ತಮ್ಮ ಬಿಡುವಿನ ವೇಳೆಯನ್ನು ಕಳೆಯಲು ಯೋಗ್ಯವಾಗಿದೆ. ಇಲ್ಲಿಗೆ ಪ್ರತಿದಿನ ನೂರಾರು ಜನರು ವಾಯು ವಿಹಾರಕ್ಕೆಂದು ಆಗಮಿಸುತ್ತಾರೆ ಹಾಗೂ ಇವರಿಗೆ ಯಾವುದೇ ರೀತಿ ಶುಲ್ಕ ಇರುವುದಿಲ್ಲ. ಪ್ರವೇಶ ಉಚಿತವಾಗಿರುತ್ತದೆ. ಈ ಕೆರೆಯು ಶಿರಾ ರಸ್ತೆ ಮಾರ್ಗದಲ್ಲಿದೆ. ಅಮಾನಿಕೆರೆಯನ್ನು ಒಂದು ಸುಂದರ ಉದ್ಯಾನವನವನ್ನಾಗಿ ಮಾಡಲು ಯೋಜನೆ ರೂಪಿಸಿದ್ದು ದಿನಾಂಕ 30–09–2009ರಂದು. ಅಂದು ಶ್ರೀ.ಆರ್.ಕೆ.ರಾಜು ಜಿಲ್ಲಾಧಿಕಾರಿಗಳು ಹಾಗೂ ತ್ರಿವಿಧ ದಾಸೋಹಿ ಶಿವಕುಮಾರ್ ಸ್ವಾಮಿಜೀಗಳು ನಗರದ ಹೃದಯ ಭಾಗದಲ್ಲಿ ಉದ್ಯಾನದ ನಿರ್ಮಾಣಕ್ಕೆ ವಿದ್ಯುಕ್ತವಾಗಿ ಶಂಕು ಸ್ಥಾಪನೆಯನ್ನು ನೆರವೇರಿಸಿದರು. ಇವರ ಜೊತೆಗೆ ಆದರ್ಶ ಕುಮಾರ್ ಎನ್.ಆರ್. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು ಹಾಗೂ ಪರಮೇಶ್ವರ್ ಕೆ.ಎಲ್. ಸಹಾಯಕ ಅಭಿಯಂತರರು, ನಗರಾಭಿವೃದ್ಧಿ ಪ್ರಾಧಿಕಾರ ತುಮಕೂರು ಇವರುಗಳು ಸಹ ಕೆರೆಯ ಅಭಿವೃದ್ಧಿಗೆ ಕೈಜೋಡಿಸಿದರು. ಅಲ್ಲದೆ ಕೆರೆ ಅಭಿವೃದ್ಧಿಗೆ ಗುತ್ತಿಗೆಯನ್ನು ನೀಡಲಾಗಿತ್ತು. ಈ ಗುತ್ತಿಗೆ ಕಾರ್ಯವನ್ನು ಯಶಸ್ವಿಯಾಗಿ ನಿಭಾಯಿಸಿದವರು ಗುತ್ತಿಗೆದಾರರಾದ ಮೆ.ರೆಡ್ಡಿ ವೀರಣ್ಣ ಕನ್ಸ್‌ಸ್ಟ್ರಕ್ಷನ್.ಪ್ರೈ.ಲಿ. ಬೆಂಗಳೂರಿನವರು. ಹೀಗೆ ಹಲವಾರು ವ್ಯಕ್ತಿಗಳ ಮತ್ತು ಸಹಕಾರಿ ಸಂಘ ಸಂಸ್ಥೆಗಳ ಶ್ರಮದಿಂದಾಗಿ ತುಮಕೂರು ಅಮಾನಿಕೆರೆಯು ಒಂದು ಸುಂದರ ಉದ್ಯಾನವಾಗಿ ಹಾಗೂ ಪ್ರವಾಸಿ ಕೇಂದ್ರವಾಗಿ ದಿನಾಂಕ 11–01–2013ರಂದು ವಿದ್ಯುಕ್ತವಾಗಿ ಹೊರ ಜಗತ್ತಿಗೆ ತೆರೆದುಕೊಂಡಿತು.

ಇಂದು ನಮ್ಮ ತುಮಕೂರಿನ ಹೆಮ್ಮೆಯ ಪ್ರತೀಕವಾಗಿ ಕಂಗೊಳಿಸುತ್ತಿದೆ. ನಿಸರ್ಗ ಪ್ರಿಯ ಮನೋಹರ ಪ್ರದೇಶವಾಗಿರುವ ಈ ಉದ್ಯಾನದ ನಿರ್ಮಾಣಕ್ಕೆ ತಗುಲಿದ ವೆಚ್ಚ ಸುಮಾರು 1,128 ಲಕ್ಷ ರೂಪಾಯಿಗಳು.[11] ಅಮಾನಿಕೆರೆಯು ಅಂದು ಕೇವಲ ಜನೋಪಯೋಗಿ ನೀರಿನ ಸೆಲೆಯಾಗಿ ಮಾತ್ರ ಉಪಯೋಗವಾಗಿತ್ತು ಆದರೆ ಇಂದು ಹೊರ ಪ್ರದೇಶದಿಂದ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ವೇದಿಕೆ ಕಲ್ಪಿಸುವ ಕಲಾಕೇಂದ್ರವಾಗಿ ಹೊರಹೊಮ್ಮಿದೆ. ಇದು ಕಲ್ಪತರು ನಾಡಿನ ಕೀರ್ತಿಗೆ ಮತ್ತೊಂದು ಗರಿಮೆಯಾಗಿದೆ.

ತುಮಕೂರು ಅಮಾನಿಕೆರೆ ನಗರಾಭಿವೃದ್ಧಿ ಪ್ರಾಧಿಕಾರ ಎಂಬ ಶಿರೋನಾಮೆಯಲ್ಲಿ ಈ ಉದ್ಯಾನವು ತನ್ನ ಸೌಂದರ್ಯದಿಂದ ಜನರನ್ನು ಆಕರ್ಷಿಸುತ್ತಾ ಬಂದಿದೆ. ಅಲ್ಲದೆ ಸ್ಥಳೀಯವಾಗಿ ಈ ಉದ್ಯಾನವನ್ನು

ಟಾಮ್ ಅಂಡ್ ಜೆರ್ರಿ ಪಾರ್ಕ್ ಎಂತಲೂ ಕರೆಯುತ್ತಾರೆ. ಇಲ್ಲಿ ಪ್ರಮುಖವಾಗಿ ಮೂರು ಮುಖ್ಯ ದ್ವಾರಗಳಿದ್ದು ಶಿರಾ ರಸ್ತೆಯ ಮಾರ್ಗದಲ್ಲಿನ ದ್ವಾರವು ಪ್ರತಿ ದಿನ ತೆರೆದಿರುತ್ತದೆ.

ಉಳಿದ ದ್ವಾರಗಳನ್ನು ಸಾರ್ವಜನಿಕ ರಜಾದಿನಗಳಲ್ಲಿ ಹಾಗೂ ಕೆಲವು ಸಾಂಸ್ಕೃತಿಕ ಕಾರ್ಯಕ್ರಮಗಳ ಸಂದರ್ಭಗಳಲ್ಲಿ ತೆರೆಯಲಾಗುತ್ತದೆ. ಈ ಉದ್ಯಾನದಲ್ಲಿ ಮಕ್ಕಳ ಮನರಂಜನಾ ಆಟದ ಮೈದಾನ, ಗಾಜಿನ ಮನೆ, ನೃತ್ಯ ಕಾರಂಜಿ, ಶಿವನ ಕಲ್ಯಾಣಿ, ದೋಣಿ ವಿಹಾರ, ಗೆಜ್ಜೆ ಭವನ, ನೃತ್ಯ ಭವನ, ಕಾವೇರಿ ಪ್ರತಿಮೆ, ಕಲ್ಲಿನ ಅಣಬೆ, ಜಿಂಕೆ ಮತ್ತು ನವಿಲಿನ ತಾಣ, ಗುಲಾಬಿ ತೋಟ, ಫುಡ್ ಪಾರ್ಕ್ ಹಾಗೂ ಕ್ಯಾಂಟೀನ್ ಹೀಗೆ ಹಲವು ಸ್ಥಳಗಳ ಅನಾವರಣವನ್ನು ಅಮಾನಿಕೆರೆ ಒಳಗೆ ನೋಡಬಹುದು. ಎಲ್ಲಾ ವಯೋಮಾನದವರನ್ನು ಗಮನದಲ್ಲಿಟ್ಟುಕೊಂಡು ಈ ಉದ್ಯಾನವನ್ನು ನಿರ್ಮಿಸಿದ್ದಾರೆಂಬುದಕ್ಕೆ ಅಲ್ಲಿನ ವ್ಯವಸ್ಥೆಗಳು ಸಾಕ್ಷಿಯಾಗಿವೆ. ವಾಯುವಿಹಾರಕ್ಕೆಂದೆ ಬರುವ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಹಾದಿಯನ್ನು ಕಲ್ಪಿಸಲಾಗಿದೆ. ವಿಶ್ರಾಂತಿ ತೆಗೆದುಕೊಳ್ಳುವ ಸ್ಥಳದಲ್ಲಿ ರೇಡಿಯೋಗಳನ್ನು ಅಳವಡಿಸಲಾಗಿದೆ. ಇದು ತುಮಕೂರಿನ ಸಿದ್ಧಾರ್ಥ ರೇಡಿಯೋ ಸ್ಟೇಷನ್‌ನಲ್ಲಿ ಬಿತ್ತರವಾಗುವ ಅನೇಕ ಕಾರ್ಯಕ್ರಮಗಳನ್ನು ಆಲಿಸಲು ಅವಕಾಶ ಮಾಡಲಾಗಿದೆ.

ಪ್ರತಿದಿನ ಬೆಳಿಗ್ಗೆ 11 ರಿಂದ ಸಂಜೆ 5 ರವರೆಗೆ ಟಿಕೆಟ್ ಕೊಡುವ ಸಮಯ. ಸೋಮವಾರದಿಂದ ಶುಕ್ರವಾರದ ವರೆಗೆ ಪ್ರವೇಶ ಶುಲ್ಕವು 5 ರೂಗಳು. ಹಾಗೂ ಶನಿವಾರ, ಭಾನುವಾರ ಮತ್ತು ಸರ್ಕಾರಿ ರಜಾ ದಿನಗಳಲ್ಲಿ 10 ರೂಗಳನ್ನು ನಿಗಧಿಗೊಳಿಸಲಾಗಿದೆ. 5 ವರ್ಷ ಮೇಲ್ಪಟ್ಟ ಎಲ್ಲರಿಗೂ ಪೂರ್ಣ ದರ ಹಾಗೂ 5 ವರ್ಷ ಒಳಗಿನ ಮತ್ತು ಅಂಗವಿಕಲ ಮಕ್ಕಳಿಗೆ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ಮಕ್ಕಳು ಆಟವಾಡಲು ಅನೇಕ ಗೇಮ್ಸ್‌ಗಳಿದ್ದು ಪ್ರತಿ ಗೇಮ್ಸ್‌ಗಳಿಗೂ ಪ್ರತ್ಯೇಕವಾದ ಟಿಕೇಟ್ ದರವಿದ್ದು 25 ರೂಗಳನ್ನು ನಿಗಧಿ ಮಾಡಿದ್ದಾರೆ. ದೂರದ ಊರಿನಿಂದ ಮಕ್ಕಳನ್ನು ಪಿಕ್‌ನಿಕ್ ಹಾಗೂ ಒಂದು ದಿನದ ಪ್ರವಾಸಕ್ಕೆಂದು ಇಲ್ಲಿಗೆ ಬರುವವರಿಗೆ 2 ರೂಗಳನ್ನು ಟಿಕೇಟ್ ದರ ಇದೆ. ನೃತ್ಯ ಕಾರಂಜಿಯನ್ನು ಪ್ರತಿ ಶನಿವಾರ ಮತ್ತು ಭಾನುವಾರ ಹಾಗೂ ಸಾರ್ವತ್ರಿಕ ರಜಾದಿನಗಳಲ್ಲಿ ಸಂಜೆ 7ರಿಂದ ಪ್ರಾರಂಭಿಸಿ ರಾತ್ರಿ 8 ಕ್ಕೆ ಮುಕ್ತಾಯವಾಗುತ್ತದೆ.[12] ಇತ್ತಿಚ್ಚಿಗೆ ಅಮಾನಿಕೆರೆಯ ಮತ್ತಷ್ಟು ಬೆಳವಣಿಗೆಗಾಗಿ ಸ್ಮಾರ್ಟ್ ಸಿಟಿ ಯೋಜನೆಯಿಂದ ಸುಮಾರು 98 ಕೋಟಿ ರೂಗಳನ್ನು ಬಿಡುಗಡೆ ಮಾಡಿದೆ ಇದು ಸಂತಸದ ವಿಚಾರವಾಗಿದೆ.

ಗಾಜಿನ ಮನೆಯು ಅಮಾನಿಕೆರೆಯ ಹೃದಯ ಎಂದೇ ಹೇಳಬೇಕು. ಇಲ್ಲಿನ ಕಾರ್ಯಕ್ರಮಗಳಿಂದಲೇ ಅಮಾನಿಕೆರೆಯ ಸೌಂದರ್ಯಕ್ಕೆ ಮೆರಗು ಬಂದಿದೆ. ಶೈಕ್ಷಣಿಕ ನಗರಿಯಾದ ತುಮಕೂರು ಕಲೆಗಳ ತವರು ಕೂಡ ಹೌದು. ಹಾಗಾಗಿಯೇ ಗಾಜಿನ ಮನೆಯಲ್ಲಿ ವರ್ಷ ಪೂರ್ತಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತಲೇ ಇರುತ್ತವೆ. ಇದರಿಂದ ಜನತೆಗೆ ಒತ್ತಡದ ಬದುಕಿನ ಜಂಜಾಟದಿಂದ ಸ್ವಲ್ಪ ರಿಲ್ಯಾಕ್ಸ್ ದೊರೆಯುವಂತೆ ಹಾಗೂ ಮಕ್ಕಳು ತಮ್ಮಲ್ಲಿನ ಸುಪ್ತ ಪ್ರತಿಭೆಯನ್ನು ಹೊರಹಾಕಲು ವೇದಿಕೆ ದೊರೆತಂತಾಗಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ಅನಾವರಣಗೊಂಡ ದಿನ ನೆರೆದ ಜನರಿಗೆ ಮನರಂಜನೆಯ ರಸದೌತಣವನ್ನು ಉಣಬಡಿಸಿದಂತಾಗುತ್ತದೆ. ಜಿಲ್ಲೆಯ ಸುತ್ತ ಮುತ್ತಲಿನ ಶಾಲಾ

ಮತ್ತು ಕಾಲೇಜು ಮಕ್ಕಳು ಹಾಡು, ನೃತ್ಯ, ನಾಟಕ, ಭಾಷಣ, ಏಕಪಾತ್ರಾಭಿನಯ ಹೀಗೆ ಅನೇಕ ಕಾರ್ಯಕ್ರಮಗಳು ಜರುಗುತ್ತಿರುತ್ತವೆ. ತುಮಕೂರು ಅಭಿವೃದ್ಧಿ ಪ್ರಾಧಿಕಾರವು ಗಾಜಿನ ಮನೆಯ ನಿರ್ಮಾಣಕ್ಕಾಗಿ ಸುಮಾರು 6 ಕೋಟಿ ರೂಗಳನ್ನು ಬಿಡುಗಡೆ ಮಾಡಿತ್ತು.

ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ ದಿನಾಚರಣೆಯಂದು ಶಾಲಾ ಮತ್ತು ಕಾಲೇಜು ಮಕ್ಕಳಿಂದ ನಾಡಿನ ಕೀರ್ತಿಯನ್ನು ಬೆಳಗುವಂತಹ ವಿಶೇಷ ಕಾರ್ಯಗಳನ್ನು ಪ್ರಸ್ತುತ ಪಡಿಸುತ್ತಾರೆ. ಅಂದು ಜಿಲ್ಲೆಯ ಸುತ್ತಲಿನ ಶಾಲಾ ಕಾಲೇಜು ವಿದ್ಯಾರ್ಥಿಗಳು ಆಗಮಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ಇಂತಹ ಕಾರ್ಯಕ್ರಮಗಳಿಗೆ ಯಾವುದೇ ರೀತಿಯ ಶುಲ್ಕವನ್ನು ಕಟ್ಟುವಂತಿಲ್ಲ ಹಾಗೂ ಸಂಪೂರ್ಣವಾದ ಶುಲ್ಕ ವಿನಾಯಿತಿಯನ್ನು ತುಮಕೂರು ಅಭಿವೃದ್ಧಿ ಮಹಾನಗರ ಪಾಲಿಕೆ ನೀಡುತ್ತದೆ. ಇದರಿಂದ ಸರ್ಕಾರಿ ಮತ್ತು ಖಾಸಗಿ ಶಿಕ್ಷಣಸಂಸ್ಥೆಗಳಿಗೆ ಹೆಚ್ಚು ಅನುಕೂಲವಾಗಿದೆ. ಉಳಿದಂತೆ ಗಾಜಿನ ಮನೆಯಲ್ಲಿ ಆಗಾಗ್ಗೆ ಆಹಾರ ಮೇಳ, ಕರಕುಶಲ ವಸ್ತು ಪ್ರದರ್ಶನ ಮತ್ತು ಮಾರಾಟ, ಸ್ಥಳಿಯ ಜನರ ಸಾಧನೆಯನ್ನು ಅಭಿನಂದಿಸಲು ಹಮ್ಮಿಕೊಳ್ಳುವ ಅಭಿನಂದನಾ ಸಮಾರಂಭಗಳು, ಎಜುಕೇಶನಲ್ ಎಕ್ಸ್‌ಪೋ ಹಾಗೂ ದೊಡ್ಡ ದೊಡ್ಡ ಕಂಪೆನಿಗಳ ಕಮರ್ಷಿಯಲ್ ಮೇಳಗಳು ನಡೆಯುತ್ತಲೇ ಇರುತ್ತವೆ. ಇವುಗಳಿಂದ ವಸ್ತುಗಳ ವಿನಿಮಯದ ಜೊತೆಗೆ ಕಲಾ ಪ್ರದರ್ಶನಕ್ಕೂ ಅವಕಾಶ ದೊರಕಿದಂತಾಗುತ್ತದೆ. ಈ ಮೇಲಿನ ಕಾರ್ಯಕ್ರಮಗಳು ಖಾಸಗಿಯಾಗಿರುವುದರಿಂದ ಇವುಗಳಿಗೆ ತುಮಕೂರು ಅಭಿವೃದ್ಧಿ ಪ್ರಾಧಿಕಾರವು ದಿನ ಮತ್ತು ಸಮಯಕ್ಕೆ ತಕ್ಕಂತೆ ಶುಲ್ಕವನ್ನು ನಿಗಧಿಗೊಳಿಸಿದೆ. ಯಾವುದೇ ವಾಣಿಜ್ಯ ಕಂಪೆನಿಗಳು ತಮ್ಮ ಜಾಹಿರಾತನ್ನು ಪ್ರಕಟಣೆ ಮಾಡಲು ಈ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಬೇಕೆಂದರೆ ಹದಿನೈದು ದಿನಗಳ ಮೊದಲೇ ಬುಕ್ ಮಾಡಬೇಕೆಂಬ ನಿಯಮವಿದೆ. ಒಂದು ದಿನದ ಬಾಡಿಗೆ 40 ಸಾವಿರ ರೂಗಳಿದ್ದು, ಒಂದು ವಾರ ಅಥವಾ ಒಂದು ತಿಂಗಳಿನ ಬಾಡಿಗೆಯಲ್ಲಿ ರಿಯಾಯಿತಿ ದರವನ್ನು ನೀಡಲಾಗುತ್ತದೆ.[13] ಗಾಜಿನ ಮನೆ ವಾಣಿಜ್ಯ ವ್ಯವಹಾರ ಒಂದು ಕಡೆ ಆದಾಯವನ್ನು ತಂದುಕೊಟ್ಟರೆ, ಮತ್ತೊಂದು ಕಡೆ ಕಲಾ ಸೌರಭದಿಂದ ಜಿಲ್ಲೆಯ ಸಂಸ್ಕೃತಿಯನ್ನು ಎತ್ತಿ ಹಿಡಿದಿದೆ. ಏನೇ ಇರಲಿ ಗಾಜಿನ ಮನೆಯು ಕಲಾವಿದರ ಮತ್ತು ಕಲಾರಸಿಕರ ಒಂದು ಕೇಂದ್ರವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ನಮ್ಮ ತುಮಕೂರಿನ ಅಮಾನಿಕೆರೆಯು ಇಷ್ಟೆಲ್ಲಾ ಆಕರ್ಷಣೆಯನ್ನು ಹೊಂದಿದ್ದು ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತಿರುವುದು ಮಾತ್ರ ಸಳ್ಳಲ್ಲ. ಅಮಾನಿಕೆರೆಯು ಮಕ್ಕಳಿಗೆ ಹಾಗೂ ಎಲ್ಲಾ ವರ್ಗದ ಜನರಿಗೂ ಮುದ ನೀಡುವ ಸ್ಥಳವಾಗಿದೆ. ಇಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳು ಎಲ್ಲರನ್ನು ಸೆಳೆಯುವ ಒಂದು ಬಾಂಧವ್ಯ ಬೆಸುಗೆಯಾಗಿದೆ ಎನ್ನಬಹುದು. ಬೇರೆ ಬೇರೆ ಸ್ಥಳಗಳಿಂದ ಬರುವ ಜನರನ್ನು ಸದಾ ಕಾಲ ಸ್ವಾಗತಿಸುವ ಅಮಾನಿಕೆರೆಯ ವೈಭವ ನೂರು ಕಾಲ ಮುಂದುವರೆಯಲಿ ಮತ್ತು ಜನರ ಮೆಚ್ಚುಗೆಯ ಪ್ರವಾಸಿ ತಾಣವಾಗಿ ಇನ್ನೂ ಹೆಚ್ಚಿನ ಮಟ್ಟಕ್ಕೆ ಅಭಿವೃದ್ಧಿಯನ್ನು ಕಾಣಲಿ ಹಾಗೂ ಇದಕ್ಕೆ ಜನರ ಮತ್ತು ಸರ್ಕಾರದ ನೆರವು ಸದಾ ಇರಲೆಂಬುದೇ ನಮ್ಮ ಆಶಯವಾಗಿದೆ.

## ಕೊನೆಟಿಪ್ಪಣಿ

[1] *ಚಂದ್ರಶೇಖರ್ ಎನ್ (ಸಂ) (2015). ಕರ್ನಾಟಕ ಕೈಪಿಡಿ, ಕರ್ನಾಟಕ ಗ್ಯಾಜೆಟಿಯರ್ ಇಲಾಖೆ, ಬೆಂಗಳೂರು ಪು. ಸಂ. 824*

[2] *ವಕ್ತೃ:  ಧನಂಜಯ ಕುಮಾರ್. (ದಿನಾಂಕ 22-09-2019). ವಯಸ್ಸು 73, ಸ್ಥಳಿಯರು, ಸೋಮೇಶ್ವರ ಪರಂ,*

[3] *ಯೋಗೇಶ್ವರಪ್ಪ ಡಿ.ಎನ್. (2012). ಕಲ್ಪಶೋಧ. ಪೂರ್ಣಿಮ ಪ್ರಿಂಟರ್ಸ್, ಪು.ಸಂ. 375*

[4] *ಮೇಲಿನದೇ., ಪು.ಸಂ. 284*

[5] *ಅಭಿಶಂಕರ್ . ಕೆ. (1969). ತುಮಕೂರು ಜಿಲ್ಲಾ ಗೆಜೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು. ಪು. ಸಂ. 37*

[6] *ಕರಿಗಿರಿ ನರಸಿಂಹ ಮೂರ್ತಿ (ಸಂ). (1947). ತುಮಕೂರು ಕೈಪಿಡಿ. ತುಮಕೂರು, ಪು.ಸಂ. 70*

[7] *ಭಾಸ್ಕರಪ್ಪ ಸಿ.ಎನ್. (1981). ತುಮಕೂರು ಜಿಲ್ಲಾ ದರ್ಶನ. ತುಮಕೂರು ಟೈಮ್ಸ್ ಪ್ರಕಾಶನ, ತುಮಕೂರು. ಪು.ಸಂ. 86*

[8] *ವಕ್ತೃ: ಸುಬ್ರಮಣ್ಯಮ್. (ದಿನಾಂಕ: 22-09-2019). ,  ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.ದಿನಾಂಕ*

[9] *ವಕ್ತೃ: ಯೋಗೇಶ್ವರಪ್ಪ ಡಿ.ಎನ್. (ದಿನಾಂಕ 20-09-2019).*

[10] *ಕರಿಗಿರಿ ನರಸಿಂಹ ಮೂರ್ತಿ (ಸಂ). (1947). ಪೂರ್ವೋಕ್ತ., ಪು.ಸಂ. 87*

[11] *ಭಾಸ್ಕರಪ್ಪ ಸಿ.ಎನ್. ಪೂರ್ವೋಕ್ತ., ಪು.ಸಂ. ಪುಟ 65*

[12] *ಕ್ಷೇತ್ರ ಕಾರ್ಯ (ದಿನಾಂಕ 22-09-2019).*

[13] *ವಕ್ತೃ: ಧನಂಜಯ್. (ದಿನಾಂಕ 22-09-2019). ಅಮಾನಿಕೆರೆಯ ಮೇಲ್ವಿಚಾರಕರು, ತುಮಕೂರು.*

## ಪರಾಮರ್ಶನ ಗ್ರಂಥ


- ಮುದ್ದು ವೀರಪ್ಪ. (2011). ತುಮಕೂರು ಜಿಲ್ಲೆಯ ಕೋಟೆಗಳ ಸಾಂಸ್ಕೃತಿಕ ಒಳನೋಟಗಳು. ತುಮಕೂರು ವಿಶ್ವವಿದ್ಯಾಲಯ, ತುಮಕೂರು.


**ಅಮಾನಿಕೆರೆಯ ಛಾಯಾಚಿತ್ರಗಳು**



**ಅಮಾನಿಕೆರೆಯ ಪ್ರವೇಶ ದ್ವಾರ**



**ಅಮಾನಿಕೆರೆಯ ಗಾಜಿನ ಮನೆ**





**ಅಮಾನಿಕೆರೆಯನ್ನು  ನಗರಾಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸುತ್ತಿರುವುದು.**